ಕರ್ನಾಟಕ ನಗರ ಮೂಲಭೂತ ಸೌಕರ್ಯ ಹಾಗೂ ಹಣಕಾಸು ಅಭಿವೃದ್ಧಿ ನಿಗಮದಿಂದ ಕರ್ನಾಟಕದ ಹನ್ನೆರಡು ಪಟ್ಟಣ ಪ್ರದೇಶದಲ್ಲಿ ಮೂಲಭೂತ ಸೌಕರ್ಯ ಯೋಜನೆಯನ್ನು ಕಾರ್ಯಗತಗೊಳಿಸುವ ಕಾರ್ಯಕ್ರಮ ಈಗ ಯಾವ ಹಂತದಲ್ಲಿದೆ.

ಅ) ಈ ಹನ್ನೆರಡು ನಗರಗಳ ಮೂಲಭೂತ ಸೌಕರ್ಯ ಅಭಿವೃದಿಗಾಗಿ ಇರುವ ಯೋಜನಾ ಅಂದಾಜು ಎಷ್ಟು? ನಗರವಾರು ವಿವರ ನೀಡುವುದು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :—

ಉತ್ತರ : ಮಧ್ಯ ಕರ್ನಾಟಕದ 13 ನಗರ ಮತ್ತು ಪಟ್ಟಣಗಳಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಗಳ ಅಭಿವೃದ್ಧಿಗೆ ವಿಶ್ವಬ್ಯಾಂಕಿನ ಆರ್ಥಿಕ ಸಹಾಯವನ್ನು ಪಡೆಯಲು ಪ್ರಸ್ತುತ ಈ ಪ್ರಸ್ತಾವನೆಯು ಈಗ ಪರಿಶೀಲನೆಯಲ್ಲಿದೆ. ಯೋಜನೆಯನ್ನು ರೂಪಿಸುವ ಕಾರ್ಯಚಟುವಟಿಕೆಗಳು ನಡೆಯುತ್ತಿವೆ ಮತ್ತು ಈಗಾಗಲೇ ಯೋಜನೆಗೆ ಸಂಬಂಧಪಟ್ಟ ಕೆಲವೊಂದು ಅಧ್ಯಯನಗಳು ಮುಗಿದಿರುತ್ತವೆ.

ಆ) ಈ ಯೋಜನೆಯು ಆರಂಭದ ಹಂತದಲ್ಲಿರುವುದರಿಂದ ಯೋಜನೆಯ ವೆಚ್ಚವನ್ನು ಇನ್ನೂ ನಿಶ್ಚಯಿಸಿರುವುದಿಲ್ಲ.

ಮುಂಡರಗಿ ತಾಲ್ಲೂಕು ಮುಂಡರಗಿ ಕೆರೆ ಕಾಮಗಾರಿ ಪ್ರಾರಂಭಿಸುವುದು.

2398 (1854) ಎಸ್.ಎಸ್. ಪಾಟೀಲ್ (ಮುಂಡರಗಿ) :— ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗದಗ ಜಿಲ್ಲೆ ಮುಂಡರಗಿ ತಾಲ್ಲೂಕು ಮೂರು ಕೆರೆಗಳಲ್ಲಿ ಬಾಕಿ ಮೂರು ವರ್ಷಗಳಾದರೂ ಕೆಲಸ ಪ್ರಾರಂಭವಾಗದಿರಲು ಕಾರಣಗಳೇನು?

ಆ) ಈ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :—

ಅ) ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನ ಕೆರೆಯ ಕಾಮಗಾರಿಯ ಅಂದಾಜು ವೆಚ್ಚ ರೂ.240.00 ಲಕ್ಷಗಳಿದ್ದು, ಕಳೆದ ಮೂರು ವರ್ಷಗಳಿಂದ ಪ್ರತಿಷತ 30ರ ಅನುದಾನವಿಲ್ಲದ ಕಾರಣ ಕೆಲಸವನ್ನು ಪ್ರಾರಂಭಿಸಲಾಗಿರುವುದಿಲ್ಲ.

2001-02 ನೇ ಸಾಲಿಗೆ 72.00 ಲಕ್ಷ ರೂ. ಪ್ರತಿಶತ 30ರ ಅನುದಾನ ದೊರೆಯುವುದರಿಂದ ಪ್ರಸಕ್ತ ವರ್ಷ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.